ಮೈಸೂರು ನಗರದ ಸುತ್ತ ಇರುವ ಕೈಗಾರಿಕೆಗಳ ನಿರೀಕ್ಷಕರ ಕೊರತೆ

801 (986) ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಸುತ್ತ ಇರುವ ಕೈಗಾರಿಕೆಗಳು ಎಷ್ಟು?

ಆ) ನಿಯಮಾನುಸಾರ ಒಬ್ಬ ನಿರೀಕ್ಷಕ ಎಷ್ಟು ಕೈಗಾರಿಕೆಗಳನ್ನು ಪರಿವೀಕ್ಷಿಸಬೇಕು?

ಇ) ಪರಿವೀಕ್ಷಣೆ ಮಾಡಬಹುದಾದ ಪರಿಮಾಣಕ್ಕೆ ಅಗತ್ಯವಾದ ಸಂಖ್ಯೆಯ ನಿರೀಕ್ಷಕರು ಇದ್ದಾರೆಯೇ?

ಈ) ಕಡಿಮೆ ಇದ್ದರೆ ತುಂಬಲು ಕೈಗೊಂಡಿರುವ ಕ್ರಮವೇನು?

ಶ್ರೀ ಎಸ್. ಆರ್. ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು) :

ಅ) 60 ಮಧ್ಯಮ ಹಾಗೂ ಬೃಹತ್ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ. ಹಾಗೂ 1373 ಸಣ್ಣ ಪ್ರಮಾಣದ ಕೈಗಾರಿಕೆಗಳು ಕಾರ್ಯನಿರ್ವಹಿಸುತ್ತಿವೆ.

ಆ) ಕೈಗಾರಿಕಾ ನಿರೀಕ್ಷಕರ ಹುದ್ದೆ ಇರುವುದಿಲ್ಲ.

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಕಾಮಗಾರಿಗಳು

802 (863) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1999-2000, 2000-2001ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖಾ ವತಿಯಿಂದ ಹಾವೇರಿ ಮತ್ತು ಗದಗ ಜಿಲ್ಲೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾಗಿರುವ ಹಣ ಎಷ್ಟು; ಕಾಮಗಾರಿಗಳಾವುವು;

ಆ) ಇವುಗಳಲ್ಲಿ ಪೂರ್ಣಗೊಂಡ ಕಾಮಗಾರಿಗಳು ಯಾವುವು;

ಇ) ಬಾಕಿ ಇರುವ ಕಾಮಗಾರಿಗಳೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯು ವ್ಯಾಪ್ತಿಯಡಿ ಬರುವ ಮೂರು ನಿಗಮಗಳ 1999-2000 ಹಾಗೂ 2000-2001ನೇ ಸಾಲಿನಲ್ಲಿ ನಿಗದಿಪಡಿಸಿದ ಹಣದ ವಿವರ ಈ ರೀತಿ ಇವೆ: